

ಪೂರ್ಣಗೊಳಿಸಿ ಅದಕ್ಕೆ ಪೂರಕವಾಗಿ ಗೀತ ರಚನೆ ಮಾಡಿಕೊಡುವಂತೆ ಕಂಪೆನಿಯೊಂದರಿಂದ ಪುಂಡಲೀಕಗೌಡರಿಗೆ ಆಹ್ವಾನ ಬಂದಿತು. ನಾಟಕ ರಂಗದ ಮೇಲೆ ಪ್ರದರ್ಶನಗೊಂಡಾಗ ಪ್ರೇಕ್ಷಕರು ಮೆಚ್ಚಿದರು. ಇದೇ ಉತ್ಸಾಹದಲ್ಲಿ ಅವರು ತಮ್ಮ ಬದುಕಿನ ಕತೆಯನ್ನು 'ಕಲ್ಪನಾ ಪ್ರಪಂಚ' ಎಂಬ ನಾಟಕವನ್ನಾಗಿಸಿದರು.

ಅವರ ಈ ನಾಟಕದ ಹಸ್ತಪ್ರತಿಯನ್ನು ಓದಿದ ಕೆಲವು ಕಂಪೆನಿ ಮಾಲೀಕರು ಬದಲಾವಣೆಗಳನ್ನು ಸೂಚಿಸಿದರು. ರಂಗಕ್ಕೆ ತರುವ ಮಾತು ಆಡಲಿಲ್ಲ. ಕೊನೆಗೆ ಸೂಳೇಭಾವಿ ಗೆಳೆಯರ ಗುಂಪು 'ಕಲ್ಪನಾ ಪ್ರಪಂಚ'ವನ್ನು ರಂಗದ ಮೇಲೆ ತಂದಿತು. ಇದರ ನಿರ್ದೇಶನದ ಚುಕ್ಕಾಣಿ ಹಿಡಿಯುವುದರ ಜೊತೆಗೆ ಪಾತ್ರಾಭಿನಯವನ್ನು ಧುತ್ತರಗಿ ಯಶಸ್ವಿಯಾಗಿ ನಿರ್ವಹಿಸಿದಾಗ ಉಳಿದ ಕಂಪೆನಿಗಳಲ್ಲಿ ಇವರ ಬಗ್ಗೆ ಚರ್ಚೆ ಶುರುವಾಯಿತು. ಅ.ನ. ಕೃಷ್ಣರಾಯರ ಕಾದಂಬರಿ ಆಧಾರಿತ ನಾಟಕ 'ನಂದಾದೀಪ' ಮೂಲಕ ಮತ್ತೊಮ್ಮೆ ಗಮನ ಸೆಳೆದರು. ಅವರ ಖ್ಯಾತಿ ಪಟ್ಟಣಗಳತ್ತಲೂ ಹರಡಿತು.

'ಶ್ರೀ ಕುಮಾರ ವಿಜಯ ನಾಟ್ಯ ಸಂಘ'ದ ಮಾಲೀಕರು, ನಾಟಕಕಾರರು, ಕೀರ್ತನಕಾರರು ಆಗಿದ್ದ ಚಿತ್ತರಗಿ ಗಂಗಾಧರ ಶಾಸ್ತ್ರಿಗಳು ಧುತ್ತರಗಿ ಅವರಿಗೆ ನಾಟಕ ಬರೆದು ಕೊಡಲು ಹೇಳಿದರು. ಆಗ ಅವರು ಬರೆದಿದ್ದೇ 'ನ್ಯಾಯಾಧೀಶ ಅಥವಾ ಕಾನೂನು' ಎಂಬ ನಾಟಕ. ಈ ಕಂಪೆನಿ ಅಚ್ಚುಕಟ್ಟಾಗಿ 'ನ್ಯಾಯಾಧೀಶ'ನನ್ನು ಸಿದ್ಧ ಮಾಡಿ ಪ್ರದರ್ಶಿಸಿತು. ಸಮರ್ಥ ನಾಟಕ, ಆಕರ್ಷಕ ಪರದೆಗಳು, ಸುಮಧುರ ಸಂಗೀತ, ಸೆಳೆಯುವ ಸಂಭಾಷಣೆಗಳಿಂದ 'ನ್ಯಾಯಾಧೀಶ' ಯಶಸ್ವಿಯಾಯಿತು. ಅದು ಗೆದ್ದಾಗ ಇತರ ನಾಟಕ ಸಂಸ್ಥೆಗಳೂ ಅವರಿಂದ ನಾಟಕ ಬರೆಸಿದವು.

ಹೊಸ ನಾಟಕಕಾರ ಧುತ್ತರಗಿ ಆಗಿನ ಬಹುತೇಕ ಎಲ್ಲಾ ಖ್ಯಾತ ನಾಟಕ ಸಂಸ್ಥೆಗಳಿಂದ ಆಹ್ವಾನ ಪಡೆದರು. ಏಣಗಿ, ನ್ಯಾಮತಿ, ಕಮತಗಿ, ಬ್ಯಾಡಗಿ ನಾಟಕ ಸಂಘಗಳಿಂದ ಬೇಡಿಕೆ ಬಂತು. ನೇಯ್ಗೆ ಜೊತೆಗೆ ನಾಟಕಗಳನ್ನೂ ನೇಯತೊಡಗಿದರು. 'ಹರಗಿರಿಜೆ', 'ಅತ್ತಿಗೆ ಅರ್ಥಾತ್ ಕಾಲಚಕ್ರ' 'ಪುರಂದರದಾಸ', 'ತಾಯಿ ಕರಳು' 'ಸಹೋದರಿ' ಅವರಿಗೆ ಯಶಸ್ಸು ತಂದುಕೊಟ್ಟ ನಾಟಗಳಾಗಿದ್ದವು.

ಒಂದೇ ಕಾಲಕ್ಕೆ ನಾಲ್ಕೈದು ಪ್ರಸಿದ್ಧ ಕಂಪೆನಿಗಳಿಗೆ ನಾಟಕ ರಚಿಸಿಕೊಡುವ ಸಂದರ್ಭವೂ ಆಗ ಬಂದಿತು. ಕೌಟುಂಬಿಕ, ಸಾಮಾಜಿಕ, ಭಕ್ತಿರಸ ಪ್ರಧಾನ, ಪೌರಾಣಿಕ, ಐತಿಹಾಸಿಕ, ಸಂತರ ಬದುಕು, ವೀರರ ಜೀವನ ಹೀಗೆ ಎಲ್ಲಾ ಬಗೆಯ ನಾಟಕಗಳನ್ನು ರಚಿಸಿಕೊಟ್ಟರು. 'ಚಿಕ್ಕಸೊಸೆ' ಧುತ್ತರಗಿ ಅವರಿಗೆ ಅಪಾರ ಜನಪ್ರಿಯ ತಂದುಕೊಟ್ಟ ನಾಟಕ. ಮುಂದೆ ಅದು 'ಸೊಸೆ ತಂದ ಸೌಭಾಗ್ಯ' ಎಂಬ ಚಲನಚಿತ್ರವಾಗಿಯೂ ಖ್ಯಾತಿ ಪಡೆಯಿತು. ಇದು ಕನ್ನಡ ಚಿತ್ರರಂಗದ ಬಣ್ಣದ ಮೊದಲ ಸಿನಿಮಾ ಸ್ಕೋಪ್ ಚಿತ್ರ. (ತಯಾರಕರು ಎಸ್.ಡಿ. ಅಂಕಲಗಿ ಮತ್ತು ಗೆಳೆಯರು). ಬಡವ– ಬಲ್ಲಿದರ ನಡುವಿನ ಸಂಘರ್ಷದ ಕತೆ ಇದ್ದ 'ಸಂಪತ್ತಿಗೆ ಸವಾಲ್' ವೃತ್ತಿರಂಗಭೂಮಿಯಲ್ಲಿ ಮಾತ್ರವಲ್ಲ ಸಿನಿಮಾ ಆಗಿಯೂ ಯಶಸ್ವಿಯಾಯಿತು.

ನಾಟಕದ ಕವಿ ಎಂದೇ ಹೆಸರಾದ ಧುತ್ತರಗಿ ತಮ್ಮದೇ ಸ್ವಂತ ನಾಟಕ ಕಂಪೆನಿ ಕಟ್ಟಿದರು. ಇದು ಅವರ ಕೈಹಿಡಿಯಲಿಲ್ಲ. ಅವರು ಬರೆದ 50ಕ್ಕೂ ಹೆಚ್ಚು ನಾಟಕಗಳನ್ನು ನಾಡಿನ ಪ್ರಖ್ಯಾತ ವೃತ್ತಿ ನಾಟಕ ಕಂಪೆನಿಗಳು ಅಭಿನಯಿಸಿದವು. ಅವರು ರೇಡಿಯೊಗಾಗಿಯೂ ನಾಟಕಗಳನ್ನು ರಚಿಸಿದ್ದಾರೆ. ಧುತ್ತರಗಿ, ವೃತ್ತಿರಂಗಭೂಮಿ ಕಂಡ ವಿಶಿಷ್ಟ ಪ್ರತಿಭಾವಂತ.